O.S .No.407/2012
ಡಿ.ಡಬ್ಲ್ಯೂ-1

ದಿನಾಂಕ: 15.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ವಾದಿ ಪರ ಶ್ರೀ ಕೆ.ಎಸ್. ವಕೀಲರಿಂದ

ನಾನು ಅನಕ್ಷರಸ್ಥ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ತರೀಕಲ್ ಗ್ರಾಮದ ಸ.ನಂ.43/1, 1 ಎಕರೆ 30 ಗುಂಟೆ, ಆಸ್ತಿಗೂ ಹಾಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಿಮಗೆ ಸೇರಿದ ಜಮೀನ ಸ.ನಂ.42 ರಲ್ಲಿದೆ ಎಂದರೆ ಸಾಕ್ಷಿ ಇದೆ, ಮುಂದುವರೆದು ಸ.ನಂ.43 ರಲ್ಲೂ ಇದೆ ಎಂದು ಹೇಳುತ್ತಾರೆ. ಸ.ನಂ.43 ರಲ್ಲಿ ನಿಮಗೆ ಜಮೀನು ಮಂಜೂರಾಗಿಲ್ಲ ಎಂದರೆ ಸಾಕ್ಷಿ ಸ.ನಂ.43 ರಲ್ಲಿ 4 ಎಕರೆ 12 ಗುಂಟೆ ಮಂಜೂರಾಗಿದೆ ಎಂದು ಹೇಳುತ್ತಾರೆ.ಸ.ನಂ.43 ರಲ್ಲಿ 4 ಎಕರೆ 12 ಗುಂಟೆ ಮಂಜೂರಾಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ. ಸ.ನಂ.43 ಪಕ್ಕಾ ಪೋಡಿ ಆಗಿಲ್ಲ ಎಂದರೆ ಸಾಕ್ಷಿ ಸ.ನಂ.43, 500 ಎಕರೆ ಜಮೀನು ಇದ್ದು, ಯಾವುದೂ ಪಕ್ಕಾ ಪೋಡಿ ಆಗಿಲ್ಲ ಎಂದು ಹೇಳುತ್ತಾರೆ. ಸ.ನಂ.42 ಪಕ್ಕಾ ಪೋಡಿ ಆಗಿಲ್ಲ ಎಂದರೆ ಸಾಕ್ಷಿ ಪಕ್ಕಾ ಪೋಡಿ ಆಗಿದೆ ಎಂದು ಹೇಳುತ್ತಾರೆ. ಸ.ನಂ.42 ರಲ್ಲಿ ಎಷ್ಟು ಪೋಡುಗಳಾಗಿ ವಿಂಗಡಣೆಯಾಗಿವೆ ಎಂದರೆ ಸಾಕ್ಷಿ 5 ಪೋಡು ಎಂದು ಹೇಳುತ್ತಾರೆ. 5 ಪೋಡುಗಳಲ್ಲೂ ನಿಮ್ಮ ಕುಟುಂಬದವರೇ ಇದ್ದಾರೆಂದರೆ ಸರಿ. ಸ.ನಂ.42, ಸ.ನಂ.43 ರ ಪಶ್ಚಿಮಕ್ಕೆ ಇದೆ ಎಂದರೆ ಸರಿ.

ಸ.ನಂ.43 ರಲ್ಲಿ ಎಷ್ಟು ಬ್ಲಾಕ್ ಗಳಾಗಿ ವಿಂಗಡಣೆ ಮಾಡಲಾಗಿದೆ ಎಂದರೆ ಸಾಕ್ಷಿ ನೂರು ಚಿಲ್ಲರೆ ಎಂದು ಹೇಳುತ್ತಾರೆ. ಸ.ನಂ.43 ರ ಉತ್ತರಕ್ಕೆ ಸ.ನಂ.40 ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಶಿವಣ್ಣ ರವರಿಗೆ ಸೇರಿದ ಜಮೀನು ಇದೆ ಎಂದು ಹೇಳುತ್ತಾರೆ. ಸ.ನಂ.42 ನಿಮಗೆ ಮಂಜೂರಾದ ನಂತರ ನೀವೇನಾದರೂ ಅಳತೆ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಮಾಡಿಸಿದ್ದೆ ಎಂದು ಹೇಳುತ್ತಾರೆ. ಅಳತೆ ಮಾಡಿಸಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸ.ನಂ.43 ನ್ನು ಅಳತೆ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಸರ್ಕಾರದವರೇ ಅಳತೆ ಮಾಡಿಸಿ, ನಮಗೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಅದರ ಬಗ್ಗೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸ.ನಂ.43 ರಲ್ಲಿ ಮಂಜೂರಾದ ಜಮೀನಿನ ನಕಾಶೆಯನ್ನ

ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ.

**( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.